## ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 1888/2023 ಸಿ.ಡಬ್ಲ್ಯೂ –04 ಪಿ.ಡಬ್ಲ್ಯೂ -02

| | | |
|---|---|---|
| ಹೆಸರು | ಃ | ಪ್ರಶಾಂತ |
| ತಂದೆಃ ಗಂಡ | ಃ | ಅಮೃತ |
| ವಯಸ್ಸು | ಃ | ೨೫ ವರ್ಷ |
| ಉದ್ಯೋಗ | : | ಖಾಸಗಿ ಉದ್ಯೋಗ |
| ವಾಸಸ್ಥಳ | ಃ | ಹಿತ್ತಲಶಿರೂರ |

ದಿನಾಂಕಃ ೦೪.೧೦.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದ ಃ**

ಆರೋಪಿ ಪರಿಚಯ ಇರುತ್ತದೆ. ಚಾಸಾ-೧ ನನ್ನ ತಾಯಿ, ಚಾಸಾ-2, 3, 5 ಮತ್ತು 6 ರವರ ಪರಿಚಯ ಇರುತ್ತದೆ.

ನಾನು, ಚಾಸಾ-೧, ಚಾಸಾ-5 ಮತ್ತು 6 ರವರು ನಮ್ಮ ಜಮೀನಿಗೆ ರಾಶಿ ಮಾಡಲು ಹೋದಾಗ ಆರೋಪಿ ನಮಗೆ ರಾಶಿ ಮಾಡಲು ಅವಕಾಶ ಮಾಡಿಕೊಟ್ಟಿರುವುದಿಲ್ಲ. ಚಾಸಾ-೧ ರವರಿಗೆ ರಾಶಿ ಯಾಕೆ ಮಾಡುತ್ತಿದ್ದೀಯಾ ಎಂದು ಹೇಳಿ ಅವಾಚ್ಯವಾಗಿ ಬೈದಿರುತ್ತಾನೆ. ಚಾಸಾ-೧ ಮತ್ತು ಆರೋಪಿ ನಡುವೆ ಬಾಯಿ ಬಾಯಿ ಮಾತಾಗಿರುತ್ತದೆ ಮತ್ತು ಆರೊಪಿ ಚಾಸಾ-೧ ರವರ ಕಪಾಳಕ್ಕೆ ಹೊಡೆದಿರುತ್ತಾನೆ, ನಾನು ಬಿಡಿಸಲು ಹೋದಾಗ ನನಗೂ ಕಪಾಳದ ಮೇಲೆ ಹೊಡೆದಿರುತ್ತಾನೆ. ಸದರಿ ಜಗಳವನ್ನು ಚಾಸಾ-೫ ಮತ್ತು ೬ ರವರು ಬಿಡಿಸಿರುತ್ತಾರೆ. ನಂತರ ನಾಲ್ಕು ದಿನ ಬಿಟ್ಟು ಠಾಣೆಗೆ ಹೋಗಿ ಫಿರ್ಯಾದಿಯನ್ನು ಸಲ್ಲಿಸಿರುತ್ತೇವೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಸ.ನಂ.245/3 ಕ್ಷೇತ್ರ 3 ಎ-36 ಗುಂಟೆ ಜಮೀನು ನನ್ನ ತಾಯಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ದಿ.16.02.2023 ರಂದು ಬೆಳಿಗ್ಗೆ 9.30 ಗಂಟೆಗೆ ರಾಶಿ ಮಾಡಲು ಹೋಗಿರುತ್ತೇವೆ ಎಂಥರೆ ಸರಿ. ಆರೋಪಿ ಚಾಸಾ-೧ ರವರ ಕೂದಲು ಹಿಡಿದು ಎಳೆದಾಡಿರುತ್ತಾನೆ ಎಂದರೆ ಸರಿ. ಈ ರೀತಿಯಾಗಿ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಎಂ.ವಿ.ಇ. ವಕೀಲರಿಂದ</u>**

ನಾನು ಐ.ಟಿ.ಐ. ವಿದ್ಯಾಭ್ಯಾಸ ಮಾಡಿರುತ್ತೇನೆ. ಆರೋಪಿ ನನ್ನ ಖಾಸಾ ಚಿಕ್ಕಪ್ಪನಾಗಬೇಕು. ಆರೋಪಿಯನ್ನು ಹೊರತುಪಡಿಸಿ ನನಗೆ ಇನ್ನು ಇಬ್ಬರು ಚಿಕ್ಕಪ್ಪಂದಿರು ಇರುತ್ತಾರೆ. ನನಗೆ ಒಟ್ಟು ನಾಲ್ಕು ಜನ ಅತ್ತೆಯರು ಇರುತ್ತಾರೆ. ಜಮೀನು ಸ.ನಂ. ೨೪೫/ಇ ನ್ನು ನನ್ನ ತಂದೆಯವರು ಚಿಕ್ಕವರಿದ್ದಾಗ ಅವರ ಹೆಸರಿನಲ್ಲಿ ನನ್ನ ಅಜ್ಜ ಖರೀದಿ ಮಾಡಿರುತ್ತಾನೆ ಎಂದರೆ ಸರಿ. ಸದರಿ ನನ್ನ ಅಜ್ಜ ಎಷ್ಟು ಎಕರೆಯನ್ನು ಖರೀದಿ ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ನನ್ನ ಅಜ್ಜ ನನ್ನ ತಂದೆಯ ಹೆಸರಿನಲ್ಲಿ ಒಟ್ಟು ೮ ಎಕರೆ ಜಮೀನನ್ನು ಖರೀದಿ ಮಾಡಿರುತ್ತಾನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಅಜ್ಜನಿಗೆ ಸಿದ್ದಣ್ಣ ಅನ್ನುವ ಒಬ್ಬ ಸಣ್ಣ ತಮ್ಮ ಇದ್ದನು ಎಂದರೆ ಸರಿ, ಈಗ ಅವನು ತೀರಿಕೊಂಡಿರುತ್ತಾನೆ. ಈ ಖರೀದಿ ಹಿಡಿದ ಜಮೀನಿನ ಬದಲಾಗಿ ಇನ್ನುಳಿದ ಜಮೀನು ನನ್ನ ಅಜ್ಜನ ತಮ್ಮನಾದ ಸಿದ್ದಣ್ಣನಿಗೆ ಹೋಗಿರುತ್ತದೆ ಎಂದರೆ ಸರಿ. ಸಿದ್ದಣ್ಣ ಸರಿ ಹೋದ ನಂತರ ಅವನ ಮಗನಾದ ಗುರುಲಿಂಗಪ್ಪನಿಗೆ ಸದರಿ ಜಮೀನು ಬಂದಿರುತ್ತದೆ ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ವಿರಾಸತದಲ್ಲಿ ನನ್ನ ತಾಯಿಗೆ ದಾವಾ ಜಮೀನು ಬಂದಿರುತ್ತದೆ ಎಂದರೆ ಸರಿ.

ನನ್ನ ಅತ್ತಿಗೆಯರು ಅಥವಾ ನನ್ನ ತಂದೆಯ ಸಹೋದರಿಯರು ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯದಲ್ಲಿ ಪಾಲು ವಾಟ್ನಿ ಕೇಳಿ ದಾವೆ ಹೂಡಿರುತ್ತಾರೆ, ಅದರಲ್ಲೂ ಸಹ ನಾನು ಪಕ್ಷಗಾರನಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿ ಊರಿಗೆ ಹೊಂದಿಕೊಂಡು ಡಾಂಬರ ರಸ್ತೆ ಪಕ್ಕದಲ್ಲಿ ಇರುತ್ತದೆ ಎಂದರೆ ಸರಿ. ಜಮೀನು ಸ.ನಂ. ೧೧೨/೮ ಸದರಿ ಹಿರಿಯ ಶ್ರೇಣಿ ದಿವಾನಿ ನ್ಯಾಯಾಲಯದ ಮುಂದೆ ಇರುವ ದಾವೆಯಲ್ಲಿ ದಾವಾ ಆಸ್ತಿ ಇರುತ್ತದೆ ಎಂದರೆ ಸರಿ. ಸ.ನಂ.೨೧೪ ಸಹ ಕೂಡ ದಾವೆಯಲ್ಲಿ ದಾವಾ ಆಸ್ತಿ ಇರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ೧೮ ಎ-೦೭ ಗುಂಟೆ ಇರುತ್ತದೆ ಎಂಥರೆ ಸರಿ. ಸದರಿ ಜಮೀನುಗಳಲ್ಲಿ ಎಲ್ಲರೂ ಸಮನಾಗಿ ಪಾಲು ತೆಗೆದುಕೊಳ್ಳೋಣ್ಣ ಎಂದರೆ ಚಾಸಾ-೧ ಒಪ್ಪುತ್ತಿಲ್ಲ ಎಂದರೆ ಸರಿ.

ಚಾಸಾ-೫ ಮತ್ತು ೬ ರವರು ನನ್ನ ಸ್ನೇಹಿತರು ಗುಲಬರ್ಗದಲ್ಲಿ ನಮ್ಮ ಮನೆಯ ಪಕ್ಕದಲ್ಲಿ ಇರುತ್ತಾರೆ ಎಂದರೆ ಸರಿ. ನ್ಯಾಯಾಲಯಕ್ಕೂ ಕೂಡ ನನ್ನ ಜೊತೆ ಬರುತ್ತಾರೆ ಎಂಥರೆ ಸರಿ. ಸದರಿ ಘಟನೆ ನಡೆದಿದೆ ಎಂದು ಹೇಳುತ್ತಿರಲ್ಲ ಅಲ್ಲಿ ಎಷ್ಟು ಜನ ಇದ್ದರು ಎಂದರೆ ಸಾಕ್ಷಿ ನಾವು ಐದು ಜನ ಇದ್ದೆವು ನಮ್ಮನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ ಎಂದು ನುಡಿಯುತ್ತಾರೆ. ಹಿತ್ತಲಶಿರೂರದಿಂದ ಗುಲಬರ್ಗಾಕ್ಕೆ ಹೋಗಬೇಕಾದರೆ ನಿಂಬರ್ಗಾ ಮೇಲೆಯೇ ಹೋಗಬೇಕಾಗುತ್ತದೆ ಮತ್ತು ಬರಬೇಕಾದರೂ ನಿಂಬರ್ಗಾದ ಮೇಲೆಯೇ ಬರಬೇಕು ಎಂದರೆ ಸರಿ. ನಾಲ್ಕು ದಿನ ತಡವಾಗಿ ಕೊಡಲು ಕಾರಣವೇನು ಎಂದರೆ ಸಾಕ್ಷಿ ಅವರು ನಮಗೆ ರಾಶಿ ಮಾಡಲು ಬಿಡುತ್ತಾರೆ ಎಂದು ನೋಡಿದೆವು ಎಂದು ನುಡಿಯುತ್ತಾರೆ. ನಾನು ಇದೇ ಮೊದಲು ಬಾರಿಗೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಆರೋಪಿ ಮತ್ತು ನಮ್ಮ ನಡುವೆ ಜಮೀನಿನ ಸಲುವಾಗಿ ತಕರಾರು ಬಿಟ್ಟು ಬೇರೆ ಯಾವ ತಕರಾರು ಇಲ್ಲ ಎಂದರೆ ಸರಿ. ಸದರಿ ಜಮೀನಜ ಊರಿಗೆ ಸಮೀಪ ಮತ್ತು ಡಾಂಬರ ರಸ್ತೆಗೆ ಹೊಂದಿಕೊಂಡಿದ್ದ ಕಾರಣ ಮುಂದಿನದಿನಗಳಲ್ಲಿ ಪ್ಲಾಟುಗಳಾಗುತ್ತವೆ ಎನ್ನುವ ಉದ್ದೇಶದಿಂದ ನಮ್ಮ ತಾಯಿ ಆರೋಪಿಗೆ ಸದರಿ ಜಮೀನಿನಲ್ಲಿ ಪಾಲು ಕೊಡುತ್ತಿಲ್ಲ ಎಂದರೆ ಸಾಕ್ಷಿ ಸದರಿ ಜಮೀನು ಬಿತ್ತು ಬೆಳೆ ಮಾಡುವ ಕೃಷಿ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ರಾಶಿ ಮಶೀನನ್ನು ತೆಗೆದುಕೊಂಡು

ಬಂದಿರುತ್ತೇವೆ ಎಂದು ಹೇಳುತ್ತಿರಲ್ಲ ಅದು ಯಾರದ್ದು ಎಂದರೆ ಸಾಕ್ಷಿ ಅದು ಯಾರದ್ದು ಎಂದು ಗೊತ್ತಿಲ್ಲ ಆದರೆ ವೈಜಾಪೂರದವರದ್ದು ಇರುತ್ತದೆ ಎಂದು ನುಡಿಯುತ್ತಾರೆ. ನಾನು ಮತ್ತು ನಮ್ಮ ತಾಯಿ ಗುಲಬರ್ಗಾದಲ್ಲಿ ವಾಸವಿರುತ್ತೇವೆ ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ ಅನುಕಂಪದ ಆಧಾರದ ಮೇಲೆ ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಾಳೆ ಎಂಧರೆ ಸರಿ. ಹಿತ್ತಲಶಿರೂರ ಗ್ರಾಮದ ಜನರು ಯಾರೂ ಸಾಕ್ಷಿ ಹೇಳಲು ಬರುವುದಿಲ್ಲ ಎನ್ನುವ ಕಾರಣಕ್ಕೆ ಗುಲಬರ್ಗಾದಲ್ಲಿರುವವರ ಹೆಸರು ಹಾಕಿಸಿರುತ್ತೇನೆ ಎಂಧರೆ ಸರಿ ಅಲ್ಲ. ಆರೋಪಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ಖೊಟ್ಟಿ ಫಿರ್ಯಾದಿಯನ್ನು ಚಾಸಾ-೧ ರವರು ಸಲ್ಲಿಸಿರುತ್ತಾರೆ, ಅವರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಸಂಪೂರ್ಣ ಜಮೀನನ್ನು ನಾವೇ ಪಡೆಯಬೇಕೆಂಬ ಉದ್ದೇಶದಿಂದ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಸದರಿ ಜಮೀನು ಒಟ್ಟು ಕುಟುಂಬದ ಜಮೀನು ಎಂದರೆ ಸರಿ. ಆರೋಪಿ ಮತ್ತು ನಮ್ಮ ನಡುವೆ ಇಲ್ಲಿಯವರೆಗೆ ಪಾಲು ವಾಟ್ನಿ ಆಗಿರುವುದಿಲ್ಲ ಎಂಧರೆ ಸರಿ.

ನಾನು, ಚಾಸಾ-೧, ಚಾಸಾ-5 ಮತ್ತು 6 ರವರು ನಮ್ಮ ಜಮೀನಿಗೆ ರಾಶಿ ಮಾಡಲು ಹೋದಾಗ ಆರೋಪಿ ನಮಗೆ ರಾಶಿ ಮಾಡಲು ಅವಕಾಶ ಮಾಡಿಕೊಟ್ಟಿರುವುದಿಲ್ಲ, ಚಾಸಾ-೧ ರವರಿಗೆ ರಾಶಿ ಯಾಕೆ ಮಾಡುತ್ತಿದ್ದೀಯಾ ಎಂದು ಹೇಳಿ ಅವಾಚ್ಯವಾಗಿ ಬೈದಿರುತ್ತಾನೆ, ಚಾಸಾ-೧ ಮತ್ತು ಆರೋಪಿ ನಡುವೆ ಬಾಯಿ ಬಾಯಿ ಮಾತಾಗಿರುತ್ತದೆ ಮತ್ತು ಆರೊಪಿ ಚಾಸಾ-೧ ರವರ ಕಪಾಳಕ್ಕೆ ಹೊಡೆದಿರುತ್ತಾನೆ, ನಾನು ಬಿಡಿಸಲು ಹೋದಾಗ ನನಗೂ ಕಪಾಳದ ಮೇಲೆ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಸದರಿ ಜಗಳವನ್ನು ಚಾಸಾ-೫ ಮತ್ತು ೬ ರವರು ಬಿಡಿಸಿರುತ್ತಾರೆ, ನಂತರ ನಾಲ್ಕು ದಿನ ಬಿಟ್ಟು ಠಾಣೆಗೆ ಹೋಗಿ ಫಿರ್ಯಾದಿಯನ್ನು ಸಲ್ಲಿಸಿರುತ್ತೇವೆ, ಸ.ನಂ.245/3 ಕ್ಷೇತ್ರ 3 ಎ-36 ಗುಂಟೆ ಜಮೀನು ನನ್ನ ತಾಯಿಯ ಹೆಸರಿನಲ್ಲಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ದಿ.16.02.2023 ರಂದು ಬೆಳಿಗ್ಗೆ 9.30 ಗಂಟೆಗೆ ರಾಶಿ ಮಾಡಲು ಹೋಗಿರುತ್ತೇವೆ, ಆರೋಪಿ ಚಾಸಾ-೧ ರವರ ಕೂದಲು ಹಿಡಿದು ಎಳೆದಾಡಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ